**ಪ್ರಮಾಣೀಕರಿಸಲಾದ ದಿನಾಂಕ : 16.08.2025.**

**ವಾಟೀ ಸವಾಲು : ಪ್ರತಿವಾದಿ ಪರ ಶ್ರೀ. K.N.G ವಕೀಲರಿಂದ :-**

ನಾನು ದ್ವಿತೀಯ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತಿದ್ದೇನೆ. ನಾನು 63 ವರ್ಷಗಳಿಂದ ಬಿಸಲೇಹಳ್ಳಿಯಲ್ಲಿ ವಾಸವಾಗಿದ್ದೇನೆ. ಈ ದಾವೆಯನ್ನು ಲಕ್ಷ್ಮಮ್ಮನವರ ಪಾರ್ವತಮ್ಮನವರ ವಿರುದ್ಧ ದಾಖಲಿಸಿರುತ್ತಾರೆ. ದಾವಾ ಆಸ್ತಿಗಳ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚೆಕ್ಕು ನಂಬರ್ ನನಗೆ ಹೇಳಲು ಆಗುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳಿಗೆ ನನ್ನ ವಕೀಲರು ಮಾಹಿತಿಯನ್ನು ನೀಡಿರುತ್ತಾರೆ.

ನಿಪಿ-1 ರಲ್ಲಿ ನಮೂದು ಮಾಡಿರುವಂತಹ ಎಲ್ಲಾ ಆಸ್ತಿಗಳು ಮೂಲತಃ ಕೆಂಪೇಗೌಡರವರಿಗೆ ಸೇರಿದ್ದಾಗಿರುತ್ತದೆ. ಕೆಂಪೇಗೌಡರವರಿಗೆ ಮೂರು ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. 1ನೇ ಚೆಲುವೇಗೌಡ, 2ನೇ ಚನ್ನೇಗೌಡ, 3ನೇ ಮಹಾಲಿಂಗಪ್ಪ, 4ನೇ ಗಂಗಮ್ಮ ಮತ್ತು ಇನ್ನೊಬ್ಬರ ಮಗಳು ಹೆಸರು ನೆನಪಿಲ್ಲ. ಕೆಂಪೇಗೌಡರವರಿಗೆ ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಪಾಲುಪಾರೀಕತ್ತನ್ನು ಮಾಡುವ ಕಾಲಕ್ಕೆ ನಾವು ವಂಶವೃಕ್ಷವನ್ನು ನೋಡಿರುವುದಿಲ್ಲ.

ಕೆಂಪೇಗೌಡರವರ ವಂಶಸ್ಥರ ಮಾಹಿತಿ ನನಗೆ ಇಲ್ಲ. ಪಾಲುಪಾರೀಕತ್ತನ್ನು ಮಧ್ಯಾಹ್ನ 1-00 ಗಂಟೆಯಿಂದ 4-00 ಗಂಟೆಯವರೆಗೆ ಮಾಡಲಾಗಿರುತ್ತದೆ. ನಿಪಿ-1 ಪಾಲುಪಾರೀಕತ್ತಿನ ದಿನಾಂಕ ನನಗೆ ನೆನಪಿಲ್ಲ, ಅದು ಸುಮಾರು 22 ವರ್ಷಗಳ ಹಿಂದೆ ಮಾಡಿರಬಹುದು. ನಿಪಿ-1 ಕ್ಕೆ ಲಕ್ಷ್ಮಮ್ಮ ಮತ್ತು ಪಾರ್ವತಮ್ಮ ಹೆಬ್ಬೆಟ್ಟನ್ನು ಹಾಕಿರುತ್ತಾರೆ. ಮಹಾಲಿಂಗಪ್ಪನವರು ಸಹಿ ಹಾಕಿರುತ್ತಾರೆ. ನಿಪಿ-1 ಕ್ಕೆ ಎಲ್ಲಾರು ಒಂದೇ ಬಾರಿ ಸಹಿ ಮಾಡಿರುತ್ತಾರೆ. ಅವರೆಲ್ಲರೂ ಸಹಿ ಮಾಡಿದ ನಂತರ ನಾವೆಲ್ಲರೂ ಸಾಕ್ಷಿಯಾಗಿ ಸಹಿ ಹಾಕಿರುತ್ತೇವೆ. ನನ್ನ ಎದುರು ಅವರು ಸಹಿ ಮಾಡಿರುತ್ತಾರೆ. ಪಾಲುಪಾರೀಕತ್ತಿನಲ್ಲಿ ಯಾರು ಯಾರಿಗೆ ಎಷ್ಟು ಜಮೀನು ಯಾರು ಯಾರಿಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಅದನ್ನು ಓದಿ ತಿಳಿದುಕೊಂಡಿರುತ್ತೇನೆ.

ಪಾಲುಪಾರೀಕತ್ತನ್ನು 3 ಪ್ರತಿ ಮಾಡಲಾಗಿರುತ್ತದೆ. ಒಂದು ಪ್ರತಿಯಲ್ಲಿ ಎಲ್ಲಾರ ಹಿಸ್ಸೆಯನ್ನು ನಮೂದು ಮಾಡಲಾಗಿರುತ್ತದೆ. ಪಾಲುಪಾರೀಕತ್ತು ನೋಂದಣಿಯಾಗಿದೆಯೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಪಾಲುಪಾರೀಕತ್ತಿನಲ್ಲಿರುವ ಆಸ್ತಿಗಳ ಸರ್ವೆ ನಂಬರ್ ಹಾಗೂ ವಿಸ್ತೀರ್ಣ ನನಗೆ ಹೇಳಲು ಆಗುವುದಿಲ್ಲ. ನಿಪಿ-1 ಹಾಗೂ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ನನಗೆ ಯಾವುದೇ ಖುದ್ದು ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಕ್ಷ್ಮಮ್ಮನವರು ನಮ್ಮ ಗ್ರಾಮದವರಾದ ಕಾರಣ ಅವರೊಂದಿಗೆ ವಿಶ್ವಾಸದಿಂದ ಇದ್ದೇನೆ ಎಂದರೆ ಸರಿ. ಆದ್ದರಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ : ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**